**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**ಸಿ.ಸಿ.ನಂ. 649/2019**

ದಿನಾಂಕಃ **14.08.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು ಃ | ಹನುಮಂತಪ್ಪ | ಚಾಸಾ-5, ಪ್ರಾಸ.-5 |
| ತಂದೆಯ ಹೆಸರುಃ | ಗೋವಿಂದಪ್ಪ | |
| ವಯಸ್ಸು ಃ | 66 ವರ್ಷ | |
| ಉದ್ಯೋಗ ಃ | ವ್ಯವಸಾಯ | |
| ವಾಸ ಃ | ಜೋಡಿತಿಮ್ಮಾಪುರ | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಚಾಸಾ-4 ನನಗೆ ಗೊತ್ತು. ಆರೋಪಿತರು ನನಗೆ ಗೊತ್ತು. ಬೀರೂರು ಪೋಲಿಸರು ಸುಮಾರು 7 ವರ್ಷಗಳ ಹಿಂದೆ ಕಳ್ಳತನದ ವಿಚಾರವಾಗಿ ಬೈಕನ್ನು ಅಮಾನತ್ತುಪಡಿಸಲು ಮಹಜರ್ ಗೆ ಸಹಕರಿಸುವಂತೆ ನನ್ನನ್ನು ಕೋರಿ ಬೀರೂರು ಠಾಣೆಗೆ ನನ್ನನ್ನು ಮತ್ತು ಚಾಸಾ-4 ರವರನ್ನು ಕರೆದಿರುತ್ತಾರೆ. ಪೋಲಿಸರು ಮಹಜರ್ ಕ್ರಮ ಜರುಗಿಸಿ ಆರೋಪಿಗಳಿಂದ ಡಿಸ್ಕವರಿ ಬೈಕನ್ನು ಮಧ್ಯಾಹ್ನ ಸಮಯದಲ್ಲಿ ವಶಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ದಿಃ 15.12.2017 ರ ಅಮಾನತ್ತು ಮಹಜರ್ ನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-8(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-8 ರ ಮಹಜರ್ ಸಮಯದಲ್ಲಿ ತೆಗೆಯಲಾದ ಛಾಯಾಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿದೆ. ನಿಪಿ-9 ರಲ್ಲಿ ನಾನು, ಚಾಸಾ-4, ಪೋಲಿಸರು ಮತ್ತು ನ್ಯಾಯಾಲಯದ ಮುಂದಿರುವ 3 ಮತ್ತು 4 ನೇ ಆರೋಪಿತರು ಇರುವುದಾಗಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ

ದಿಃ04.12.2017 ರಂದು ಚಾಸಾ-1 ರವರ ತೋಟದ ಮನೆಯಿಂದ ಕೊಬ್ಬರಿ ಕಳ್ಳತನ ಮಾಡಲು ಬೈಕನ್ನು ಉಪಯೋಗಿಸಿದ್ದು ಸದರಿ ಬೈಕನ್ನು ವಶಪಡಿಸಿಕೊಳ್ಳುವ ಸಲುವಾಗಿ ಅಮಾನತ್ತು ಮಹಜರ್ ಗೆ ಸಹಕರಿಸುವಂತೆ ಕೋರಿ ನನಗೆ ಮತ್ತು ಚಾಸಾ-4 ರವರಿಗೆ ಪೋಲಿಸರು ಕೋರಿಕೊಂಡಿದ್ದರು ಎಂದರೆ ಸರಿ. ದಿಃ 15.12.2017 ರಂದು ನಾನು ಮತ್ತು ಚಾಸಾ-4 ರವರು ಠಾಣೆಗೆ ಹೋಗಿದ್ದು 3 ರಿಂದ 5 ನೇ ಆರೋಪಿತರು ಠಾಣೆಯಲ್ಲಿ ಹಾಜರಿದ್ದು ಅವರು ತೋರಿಸಿದ ಬೈಕ್ ಸಂಖ್ಯೆ ಕೆಎ-18 ಇಎ-6058 ನ್ನು ಮಧ್ಯಾಹ್ನ 12.30 ರಿಂದ 1.00 ಗಂಟೆವರೆಗೆ ನಿಪಿ-8 ರ ಮಹಜರ್ ನಂತೆ ಅಮಾನತ್ತು ಕ್ರಮ ಜರುಗಿಸಿ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಅದೇ ಸಮಯದಲ್ಲಿ ನಿಪಿ-9 ರಂತೆ ಛಾಯಾಚಿತ್ರ ತೆಗೆದಿರುತ್ತಾರೆ ಎಂದರೆ ಸರಿ.

ಪಾಟೀಸವಾಲುಃ ಆರೋಪಿ ಪರ ಶ್ರೀ ಎಂ ಎಸ್ ಬಿ ವಕೀಲರಿಂದಃ

ಪೋಲಿಸರ ಕೋರಿಕೆ ಮೇರೆಗೆ ಸಹಿ ಮಾಡಿ ಛಾಯಾಚಿತ್ರಕ್ಕೆ ನಿಂತಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಬೇರೆ ಯಾವುದೇ ವಿಷಯಗಳು ಗೊತ್ತಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.